ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	560
ಮಾನ್ಯ ಸದಸ್ಯರ ಹೆಸರು	ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಉತ್ತರಿಸುವ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	09-03-2020

	ಪ್ರಶ್ನೆ	ಉತ್ತರ
(ಅ)	ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳೆಷ್ಟು; ಅವುಗಳಲ್ಲಿ ಎಷ್ಟು ಖಾಲಿ ಇವೆ (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು)	ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
(ಆ)	ಸದರಿ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರು ಎಷ್ಟು ಜನ ಇದ್ದಾರೆ; ಅವರು ಎಷ್ಟು ವರ್ಷ/ದಿನಗಳಿಂದ ಕೆಲಸ ಮಾಡುತ್ತಿದ್ದಾರೆ (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು)	ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರುಗಳನ್ನು ಪ್ರತಿ ವರ್ಷ ಕಾರ್ಯಭಾರದ ಅಗತ್ಯತೆಯ ಅನುಗುಣವಾಗಿ ಸರ್ಕಾರದ ಮೀಸಲಾತಿ ಮತ್ತು ನಿಯಮಾವಳಿಗಳನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು.
(ಇ)	ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾದ ಬೋಧಕೇತರ ಹುದ್ದೆಗಳೆಷ್ಟು; ಅದರಲ್ಲಿ ಖಾಲಿ ಹುದ್ದೆಗಳೆಷ್ಟು; (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು);	
(ಈ)	ಈ ರೀತಿ ಬೋಧಕ/ಬೋಧಕೇತರ ಸಿಬ್ಬಂದಿ ಇಲ್ಲದೇ ವಿಶ್ವವಿದ್ಯಾಲಯಗಳು ನಡೆಯುವುದಾದರೂ ಹೇಗೆ; (ವಿವರ ನೀಡುವುದು);	ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಕಾರ್ಯ-ಚಟುವಟಿಕೆಗಳಿಗೆ ತೊಂದರೆಯಾಗದಂತೆ ಅರ್ಹ ಅತಿಥಿ ಉಪನ್ಯಾಸಕರನ್ನು ಕಾಲ-ಕಾಲಕ್ಕೆ ನೇಮಿಸಿಕೊಂಡು ಬೋಧನಾ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ ಹಾಗೂ ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಬೋಧಕೇತರ ಸಿಬ್ಬಂದಿಗಳನ್ನು ವಿವಿಧ ಏಜೆನ್ಸಿಗಳ ಮೂಲಕ ನೇಮಕ ಮಾಡಿಕೊಂಡು ವಿಶ್ವವಿದ್ಯಾಲಯದ ಆಡಳಿತಾತ್ಮಕ ಕಾರ್ಯಗಳನ್ನು ಯಾವುದೆ ಅಡೆ-ತಡೆ ಇಲ್ಲದೆ ನಡೆಸಲಾಗುತ್ತಿದೆ.
(ಉ)	ತಕ್ಷಣ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಸರ್ಕಾರದ ಆದೇಶ ಸಂಖ್ಯೆ: ಇಡಿ 136 ಯುಎನ್ಇ 2017, ದಿನಾಂಕ: 03-06-2019ರಲ್ಲಿ ವಿಶ್ವವಿದ್ಯಾಲಯಗಳಲ್ಲಿ ಬೋಧಕ ವೃಂದದ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಶೀಘ್ರವಾಗಿ ಭರ್ತಿ ಮಾಡಿಕೊಳ್ಳುವಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿರುತದೆ..

ಸಂಖ್ಯೆ: ಇಡಿ 96 ಯುಎನ್ಇ 2020

(ಡಾ: ಅಶ್ವತ್ಥ್ ನಾರಾಯಣ ಸಿ.ಎನ್.)

ಉಪ ಮುಖ್ಯಮಂತ್ರಿಗಳು

(ಉನ್ನತ ಶಿಕ್ಷಣ, ಐಟಿ & ಬಿಟಿ,

ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ)

೧೨

ಅನುಬಂಧ

ಕ್ರಸಂ.	ವಿಶ್ವವಿದ್ಯಾಲಯದ ಹೆಸರು	ಮಂಜೂರಾದ ಬೋಧಕ ಹುದ್ದೆ	ಖಾಲಿ ಇರುವ ಬೋಧಕ ಹುದ್ದೆ	ಮಂಜೂರಾದ ಬೋಧಕೇತರ ಹುದ್ದೆ	ಖಾಲಿ ಇರುವ ಬೋಧಕೇತರ ಹುದ್ದೆ	ಅತಿಥಿ ಉಪನ್ಯಾಸಕರ ಸಂಖ್ಯೆ
1	ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ	151	55	137	97	97
2	ಕನ್ನಡ ವಿಶ್ವವಿದ್ಯಾಲಯ	73	16	234	67	20
3	ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ	120	32	272	135	65
4	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ	137	59	574	363	02
5	ಗುಲ್ಬರ್ಗ ವಿಶ್ವವಿದ್ಯಾಲಯ	248	183	707	462	349
6	ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ	161	59	123	106	150
7	ಕರ್ನಾಟಕ ಜಾನಪದ ವಿಶ್ವವಿದ್ಯಾಲಯ	21	21	35	33	35
8	ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ	103	35	173	161	110
9	ತುಮಕೂರು ವಿಶ್ವವಿದ್ಯಾಲಯ	210	82	221	168	61
10	ದಾವಣಗೆರೆ ವಿಶ್ವವಿದ್ಯಾಲಯ	147	13	179	13	27
11	ಕುವೆಂಪು ವಿಶ್ವವಿದ್ಯಾಲಯ	238	42	590	266	288
12	ಮೈಸೂರು ವಿಶ್ವವಿದ್ಯಾಲಯ	664	346	1358	737	710
13	ಬೆಂಗಳೂರು ವಿಶ್ವವಿದ್ಯಾಲಯ	570	323	1592	891	435
14	ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ	15	15	19	19	30
15	ಕರ್ನಾಟಕ ವಿಶ್ವವಿದ್ಯಾಲಯ	679	408	1324	906	131
16	ಸಂಸ್ಕೃತ ವಿಶ್ವವಿದ್ಯಾಲಯ	71	28	62	30	01
17	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ	228	84	425	192	18
18	ಬೆಂಗಳೂರು ಉತ್ತರ ವಿಶ್ವವಿದ್ಯಾಲಯ	28	22	109	104	58
19	ಮಂಗಳೂರು ವಿಶ್ವವಿದ್ಯಾಲಯ	273	88	547	282	405